ಕರ್ನಾಟಕ ಸರ್ಕಾರ

ಉಪತಹಶೀಲ್ದಾರರು ನಾಡಕಾರ್ಯಾಲಯ ಚೋರನೂರು ಇವರ ನಡವಳಿಕೆಗಳು

ಉಪಸ್ಥಿತಿ: ಶ್ರೀ ಗುರುರಾಜ್.ಕೆ ದೇಸಾಯಿ, ಉಪತಹಶೀಲ್ದಾರರು

ಅರ್ಜಿದಾರರು:

1) ಧರ್ಜಿ ರಾಮಪ್ಪ ತಂದೆ ಲೇಟ್. ರಜೀತ್ ಭೀಮಪ್ಪ
2) ಧರ್ಜಿ ತಿಪ್ಪೇಸ್ವಾಮಿ ತಂದೆ ಲೇಟ್. ರಜೀತ್ ಭೀಮಪ್ಪ

ವಿರುದ್ಧದಾರರು: ಹುಲಿಗೆಮ್ಮ ತಂದೆ ಲೇಟ್. ಧರ್ಜಿ ಲಕ್ಕಪ್ಪ, ಚೋರನೂರು

ವಿಷಯ:- ಚೋರನೂರು ಗ್ರಾಮದ ಭೂಮಿ ಸ.ನಂ.799/ಬಿ ರ ಕ್ಷೇತ್ರ 1.43 ಎಕರೆ ವರ್ಗಾವಣೆ ಮಾಡುವ ಕುರಿತು ತಕರಾರು ಬಂದ ಬಗ್ಗೆ ವಿಚಾರಣೆ.

ಪೀಠಿಕೆ:- ಮೇಲ್ಕಾಣಿಸಿದ ವಿಷಯ ಕುರಿತು ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸ್ ಜಾರಿಮಾಡಲಾಯಿತು. ವಾದಿ ಮತ್ತು ಪ್ರತಿವಾದಿಗಳು ಹಾಜರು ಇರುತ್ತಾರೆ. ಪ್ರತಿವಾದಿಯು ಕೇವಲ ಒಂದು ಅರ್ಜಿ ಸಲ್ಲಿಸಿ ನನಗೆ ಸದರಿ ಸ.ನಂ. ಭೂಮಿಯಲ್ಲಿ ಪಾಲು ನೀಡಿಲ್ಲ, ಪಾಲು ಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ ಮತ್ತು ಯಾವುದೇ ಪೂರ್ವಿ ದಾಖಲೆಗಳನ್ನು ಅರ್ಜಿದಾರರ ಹಕ್ಕನ್ನು ಸಾಧಿಸುವಂತೆ ದಾಖಲೆಗಳನ್ನು ಇದುವರೆಗೆ ವಿಚಾರಣಾ ಅಧಿಕಾರಿಗೆ ವಿಚಾರಣಾ ಸಂದರ್ಭದಲ್ಲಿ ಹಾಜರುಪಡಿಸಿರುವುದಿಲ್ಲ ಮತ್ತು ಸದರಿ ಸ.ನಂ. ಭೂಮಿ ಕುರಿತು ಖಂಡಿತ ಕ್ರಯ ಪತ್ರವಾಗಿರುತ್ತದೆ. ಜೆ-ನಮೂನೆ ಹೊ.4463 ರನ್ವಯ ತಿಳಿಸಿದಂತೆ ಚೀಟಿ ಕ್ರಯಬದ್ಧವಾಗಿ ಉಪನೊಂದಣಾಧಿಕಾರಿ ಸಂಡೂರು ಇವರಲ್ಲಿ ಖಂಡಿತ ಕ್ರಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಜೆ-ನಮೂನೆ ಸ್ಲಿಪ್ಪಿಗೆ ಅನುಗುಣವಾಗಿ ಖಂಡಿತ ಖರೀದಿಯಾಗಿದ್ದು, ಇದನ್ನು ತಿರಸ್ಕರಿಸುವ ಅಧಿಕಾರವು ಕಂದಾಯ ಅಧಿಕಾರಿಗಳಿಗೆ ಇರುವುದಿಲ್ಲ ಹಾಗೂ ತಕರಾರುದಾರರು ಹಿಂದೂ ವಾರಸ ಕಾಯ್ದೆ ಅನುಗುಣವಾಗಿ ಒಂದನೆ ಷೆಡ್ಯೂಲ್‌ನಲ್ಲಿ ವಾರಸುದಾರರು ಆಗುವುದಿಲ್ಲ ಹಾಗೂ ಅವಿಭಕ್ತ ಕುಟುಂಬದಾಗಿದ್ದು ಮತ್ತು ದಾಯಾದಿತ್ಯ ಸ್ವತ್ತುಗಳಿಗಾಗಿ ಹಕ್ಕನ್ನು ಅರ್ಜಿಸ್ವತ್ತು ಉತ್ತರ ಜೀವಿತ ಅಧಿಕಾರದ ಮಾನ್ಯತೆಯನ್ನು ಹೊಂದಿರುವುದಿಲ್ಲ. ಈ ಹಿನ್ನಲೆಯಲ್ಲಿ ತಕರಾರುದಾರರ ಅರ್ಜಿಯನ್ನು ತಿರಸ್ಕರಿಸಿ ಈ ಕೆಳಗಿನಂತೆ:

ಆರ್‌ಆರ್‌ಟಿ/ತಕರಾರು/22/16-17 **ಆದೇಶ** ದಿನಾಂಕ:27.06.2016

ಪೀಠಿಕೆಯಲ್ಲಿ ವಿವರಿಸಿರುವಂತೆ ಅರ್ಜಿದಾರರಾದ ಧರ್ಜಿ ರಾಮಪ್ಪ ತಂದೆ ಲೇಟ್ ರಜೀತ್ ಭೀಮಪ್ಪ ಸ.ನಂ.799/ಬಿ ಕ್ಷೇತ್ರ 0.72 ಎಕರೆ, ಧರ್ಜಿ ತಿಪ್ಪೇಸ್ವಾಮಿ ತಂದೆ ಲೇಟ್ ರಜೀತ್ ಭೀಮಪ್ಪ ಇವರಿಗೆ ಸರ್ವೆ ನಂ.799/ಬಿ ಕ್ಷೇತ್ರದ 0.71 ಎಕರೆ ಪಟ್ಟಾ (ವಿಸ್ತೀರ್ಣ 1.43 ಎಕರೆ) ವರ್ಗಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ದಿನಾಂಕ 27.06.2016 ರಂದು ಬಹಿರಂಗವಾಗಿ ಘೋಷಿಸಲಾಯಿತು.

Megha.c
16/7/16

ಉಪತಹಶೀಲ್ದಾರರು,
ನಾಡ ಕಾರ್ಯಾಲಯ, ಚೋರನೂರು.